ಅಂಗಡಿಗೆ ಬರುವ ಗಿರಾಕಿಗಳು, ಸ್ನೇಹಿತರು ಇವರೆಲ್ಲಾ ಕ್ರಿಶ್ಚಿಯನ್ನರಾದುದರಿಂದ ಅವರಾಡುವ ಮಾತಿನ ಶೈಲಿ ಇವರ ಸಾಹಿತ್ಯದ ಜೀವಾಳವಾಯಿತು. ಕಥಾಬೀಜ ಅಂಗಡಿಗೆ ಬರುವ ಗಿರಾಕಿಗಳಿಂದಲೇ ಸಿಗುವಂತಾಯಿತು. ಇವರೊಬ್ಬ ಕ್ರಿಶ್ಚಿಯನ್ ಸಮಾಜದ ಪ್ರತಿನಿಧಿಯಂತೆ ಕ್ರೈಸ್ತರ ಬದುಕಿನ ಸೂಕ್ಷ್ಮಚಿತ್ರಣವನ್ನು ಸಾಹಿತ್ಯಕ್ಕೆ ತಂದರು. ಇವರು ಕ್ರಿಶ್ಚಿಯನ್ನರ ಮಾತಿನ ಶೈಲಿ ಮತ್ತು ಸಂಸ್ಕೃತಿಯನ್ನು ಎಷ್ಟು ಅಪ್ಯಾಯಮಾನವಾಗಿ ತರುತ್ತಾರೆಂದರೆ ಇವರು ಹುಟ್ಟು ಕ್ಯಾಥೋಲಿಕ್ ಅಲ್ಲ ಎನ್ನುವಂತಿಲ್ಲ. ಗೋವೆಯ ಕೊಂಕಣಿಯಲ್ಲಿ ಕ್ರೈಸ್ತರ ಬದುಕನ್ನು ಚಿತ್ರಿಸಿದ ಏಕಮೇವ ಲೇಖಕರೆಂದರೆ ಮಾವ್‌ಜೊ. ಇದಕ್ಕೆ ಸಾಕ್ಷ್ಯ ಅವರ ಕಾದಂಬರಿ, ಕತೆಗಳಲ್ಲಿ ಸಿಗುತ್ತದೆ.

ಮಾಜೋರ್ಡ್‌ಯ ರೇಲ್ವೆ ಸ್ಟೇಷನ್ ಹಿಂಭಾಗ ಇವರ ಕಿರಾಣಿ ಅಂಗಡಿಯಿತ್ತು. ಬೆಳಗ್ಗೆ ಸ್ನಾನ ಮುಗಿಸಿ ತಿಂಡಿ ತಿಂದು ಒಂಬತ್ತು ಗಂಟೆಗೆ ಅಂಗಡಿಗೆ ಹೋದರೆ ರಾತ್ರಿ ಅಂಗಡಿ ಮುಚ್ಚಿ ಮನೆಗೆ ಬರುವುದರಲ್ಲಿ ಒಂಬತ್ತು ಗಂಟೆಯಾಗುತ್ತಿತ್ತು. ಮಧ್ಯೆ ಒಂದೆರಡು ಗಂಟೆ ಬಿಡುವು ಸಿಕ್ಕರೆ ಸಾಮಾನು ಖರೀದಿಗಾಗಿ ಓಡಾಡಬೇಕಾಗುತ್ತಿತ್ತು. ಅಂಥ ಬಿಡುವಿಲ್ಲದ ದಿನಗಳಲ್ಲಿ ಅವರಲ್ಲಿ ಅವಿತಿದ್ದ ಲೇಖಕ ಕಥಾಬೀಜ ಹುಡುಕಾಡುತ್ತಿದ್ದ, ವಸ್ತುವಿನ ಚಿಂತನ ಮಂಥನ ಮಾಡುತ್ತಿದ್ದ... ಬರೆಯುವ ತುಡಿತ ಹೆಚ್ಚಾಗುತ್ತಿದ್ದಂತೆ ರಾತ್ರಿ ಎರಡು ಅಥವಾ ಮೂರು ಗಂಟೆಯವರೆಗೂ ಕತೆ ಬರೆದು ಮುಗಿಸುತ್ತಿದ್ದ. ದಾಮೋದರ ಮಾವ್‌ಜೊ ಅವರು ಬರೆದ ಕತೆಗಳು ಒಂದೇ ಬೈಠಕ್‌ನಲ್ಲಿ ಬರೆದವುಗಳು.



> ಗೋವೆ ಸ್ವತಂತ್ರ ರಾಜ್ಯವಾದಾಗ ಗೋವೆಯ ರಾಜ್ಯಭಾಷೆಯ ಸಮಸ್ಯೆ ತಲೆಎತ್ತಿದಾಗ, ಗೋವೆಯ ಅಸ್ತಿತ್ವ, ಅಸ್ಮಿತೆಯ ಪ್ರಶ್ನೆ ಬಂದಾಗ ದಾಮೋದರರು ಚಳವಳಿಯ ತಂಡದ ಮುಂದಾಳುಗಳಲ್ಲಿ ಒಬ್ಬರಾಗಿ ದುಡಿದಿದ್ದಾರೆ.

## ಕಥಾಕೃಷಿ

1963–64ರಲ್ಲಿ ಇವರು ‘ತೂ ವಚೂಂ ನಾಕಾ’ (ನೀನು ಹೋಗಬೇಡ) ಎಂಬ ಮೊದಲ ಕತೆ ಬರೆದರು. ಅದು ‘ನವೆಂ ಗೋಂಯ್’ ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಅದು ಎಷ್ಟು ಜನಪ್ರಿಯವಾಯಿತೆಂದರೆ ಅದು ಇಂಗ್ಲಿಷಿನಲ್ಲಿ **Do not go away** ಎಂಬ ಹೆಸರಿನಲ್ಲಿ ‘ಈವ್ಸ್ ವೀಕ್ಲಿ’ಯಲ್ಲಿ ಪ್ರಕಟವಾಯಿತು. 1971ರ ಅವರ ಮೊದಲ ಕಥಾಸಂಗ್ರಹ ‘ಗಾಂಥನ’ ಪ್ರಕಟವಾಯಿತು. ಇದುವರೆಗೆ ‘ಜಾಗರಣಾಂ’, ‘ರುಮಡಫೂಲ’, ‘ಭುರಗಿಂ ಮಗೇಲಿ ತೀ’, ‘ಚಿತ್‌ತರಂಗಿ’ ಎಂಬ ಐದು ಕಥಾಸಂಕಲನಗಳು ಹೊರಬಂದಿವೆ. ಅವುಗಳಲ್ಲಿ ಆಯ್ದ ಕೊಂಕಣಿ ಕತೆಗಳನ್ನು ನಾನು